ವುದನ್ನು ಆಲೋಚಿಸಿರುತ್ತಾನೆ ಎಂದು ಬರೆದಿತ್ತಲ್ಲದೆ, ಅವರು ಸ್ಮರಣೆಗೆ ತಂದುಕೊಂಡ ಸಂಸ್ಕೃತದ ವಾಕ್ಯವೂ ಬರೆದಿತ್ತು. ಆಮೇಲೆ ವಿವೇಕಾನಂದರ ಗೆಳೆಯರಲ್ಲಿ ಒಬ್ಬನನ್ನು ಕುರಿತು, "ಈಗ ನಿನ್ನ ಚೀಟಿಯನ್ನು ಬಿಚ್ಚಿನೋಡು" ಎಂದನು. ಅದರಲ್ಲಿ ಕಠಿಣವಾದ ಅರಬ್ಬಿಭಾಷೆಯ ಕೊರಾನಿನ ವಾಕ್ಯವೊಂದನ್ನು ಮಂತ್ರವಾದಿಯು ಬರೆದಿದ್ದನು. ಆ ವಾಕ್ಯವಾದರೋ ಆ ಗೆಳೆಯನು ತನ್ನ ಮನಸ್ಸಿನಲ್ಲಿ ಸ್ಮರಿಸಿಕೊಂಡದ್ದೇ ಆಗಿತ್ತು. ಮೂರನೆಯ ಗೆಳೆಯನು ಜರ್ಮನ್‌ಭಾಷೆಯ ವೈದ್ಯಶಾಸ್ತ್ರದ ಗ್ರಂಥದಿಂದ ಒಂದು ವಾಕ್ಯವನ್ನು ಸ್ಮರಿಸಿಕೊಂಡಿದ್ದನು. ಅವನು ಚೀಟಿಯನ್ನು ಬಿಚ್ಚಿ ನೋಡಿದಾಗ ಅದರಲ್ಲಿಯೂ ಆ ಜರ್ಮನ್ ವೈದ್ಯಶಾಸ್ತ್ರದ ವಾಕ್ಯವೇ ಬರೆದಿತ್ತು. ಈ ಘಟನೆಯಿಂದ ವಿವೇಕಾನಂದರು ವಿಸ್ಮಯಾಭಿಭೂತರಾಗಿಬಿಟ್ಟರು.

ಆ ಮಂತ್ರವಾದಿಯ ಸಮಕ್ಷಮದಿಂದ ಮರಳಿ ಬಂದಮೇಲೆ, "ನಾನೇನಾದರೂ ಆತನ ಸಾಮೀಪ್ಯದಲ್ಲಿ ಮೋಸಹೋದೆನೇ, ಏನಾದರೂ ಮಂಕುಬೂದಿ ಎರಚಿಸಿಕೊಂಡಿದ್ದೇನೇ" ಎಂಬ ಸಂಶಯ ವಿವೇಕಾನಂದರನ್ನು ಕಾಡತೊಡಗಿತು. "ಮತ್ತೆ ಆತನನ್ನು ಪರೀಕ್ಷಿಸಬೇಕು, ಆತನ ವಿಚಿತ್ರ ಶಕ್ತಿಯನ್ನು ದೃಢಪಡಿಸಿಕೊಳ್ಳಬೇಕು" ಎಂಬ ಜಿಜ್ಞಾಸೆಯಿಂದ ಪ್ರೇರಿತರಾಗಿ, ಹೊಸ ಗೆಳೆಯರನ್ನು ಕಟ್ಟಿಕೊಂಡು, ಸಖಾರಾಮನ ನಿವಾಸಕ್ಕೆ ಹೋದರು. ಆಗಲೂ ಆತನು ಎಂದಿನಂತೆಯೇ ಆಶ್ಚರ್ಯಕರವಾದ ಬಗೆಯಲ್ಲಿ ತನ್ನ ವಿದ್ಯೆಯನ್ನು ಪ್ರದರ್ಶಿಸಿ, ಅದ್ಭುತವಾದ ವಿಜಯವನ್ನು ಸಾಧಿಸಿದನು.

ಈ ಬಗೆಯ ಯೋಗಶಕ್ತಿಯನ್ನು ತಿಳಿಯಬಯಸುವವರು ವ್ಯವಹಾರ ಜೀವನಕ್ಕೆ ಬೇಕಾಗುವ ಸಂಕಲ್ಪಕ್ಕಿಂತಲೂ ಹೆಚ್ಚಿನ ಸಂಕಲ್ಪದಿಂದ ಹೊರಡಬೇಕು. ನಮ್ಮ ದೈನಂದಿನ ವ್ಯವಹಾರಕ್ಕೇ ಎಷ್ಟೊಂದು ಏಕಾಗ್ರತೆ ಬೇಕು! ಮನೆಯಲ್ಲಿ ತಂದೆ ತಾಯಿ ಬಂಧುಬಳಗ ಮಡದಿಮಕ್ಕಳು ಯಾರು ಸತ್ತರೂ ದಿನನಿತ್ಯದ ವ್ಯವಹಾರವನ್ನು ಮಾತ್ರ ನಿಲ್ಲಿಸುವಂತಿಲ್ಲ. ನಮ್ಮ ಹೃದಯವೇ ಶಿಥಿಲವಾಗುತ್ತಿದ್ದರೂ, ನಾವು ಯಮಯಾತನೆ ಅನುಭವಿಸುತ್ತಿದ್ದರೂ ನಮ್ಮ ನಿತ್ಯದ ಕಾರ್ಯಕ್ಷೇತ್ರವನ್ನು ಪ್ರವೇಶಿಸಲೇಬೇಕು. ಮನಸ್ಸನ್ನು ಕುರಿತ ಸಾಧನೆಯಾದರೋ ಇದಕ್ಕಿಂತ ಹೆಚ್ಚಿನ ಶ್ರಮವನ್ನು ಬಯಸುತ್ತದೆ. ಹಾಗೇನಾದರೂ ಅದರಲ್ಲಿಯೇ ತೊಡಗಿಕೊಂಡು ಸಾಧನೆ ಮಾಡಿಬಿಟ್ಟರೆ, ನಾವು ಪೂರ್ಣಾತ್ಮರೇ ಆಗಿ ಮುಕ್ತರಾಗಿಬಿಡಬಹುದು. ಒಂದು ವೇಳೆ ಅದು ಸಾಧ್ಯವಾಗದಿದ್ದರೂ, "ಈ ಯೋಗವು ಸತ್ಯವಾದುದು, ಅಲ್ಲಿನ ವಿಷಯಗಳನ್ನು ಸಾಕ್ಷಾತ್ಕಾರ ಮಾಡಿಕೊಂಡವರು ಇದ್ದಾರೆ" ಎಂಬುದನ್ನಾದರೂ ನಂಬಿ ಮನವರಿಕೆ ಮಾಡಿಕೊಳ್ಳಬಹುದು.

## ಶ್ವಾನರಾಜನ ಆನಂದಲೋಕ

**ಪ್ರ**ತಿಯೊಬ್ಬ ಮನುಷ್ಯನ ಸುಖದ ಕಲ್ಪನೆಯೂ ಬೇರೆಬೇರೆಯೇ ಆಗಿರುತ್ತದೆ. ಅನೇಕರು ಇಂದ್ರಿಯ ವಿಷಯಗಳಲ್ಲಿಯೇ ಆನಂದವನ್ನು ಕಂಡರೆ, ಕೆಲವರು ಮಾತ್ರ ಅತೀಂದ್ರಿಯವಾದ ಆನಂದವನ್ನು ಅರಸುತ್ತಾರೆ. ಅವರು ಆತ್ಮಸಾಕ್ಷಾತ್ಕಾರದ ಸಾಧನೆಯ ಮೂಲಕ ಬ್ರಹ್ಮಾನಂದಪರಾಯಣರಾಗುತ್ತಾರೆ. ವಿಜ್ಞಾನಿಗಳಾದವರು ಪ್ರಕೃತಿಯ ರಹಸ್ಯಗಳನ್ನು ಉದ್ಘಾಟಿಸುವುದರಲ್ಲಿಯೇ ಪರಮಾನಂದ ಭರಿತರಾಗುತ್ತಾರೆ.

ಯಾವುದೋ ಪಟ್ಟಣವೊಂದರಲ್ಲಿ ಖಗೋಳವಿಜ್ಞಾನಿಯೊಬ್ಬನಿದ್ದನು. ಆಕಾಶಕಾಯಗಳ ಅಧ್ಯಯನದಲ್ಲಿಯೇ ಅವನು ಸಂತೋಷವನ್ನು ತುಂಬಿಕೊಳ್ಳುತ್ತಿದ್ದನು. ಬಡವನಾಗಿದ್ದುದರಿಂದ ಮದುವೆಯಾಗುವ ಗೋಜಿಗೂ ಹೋಗದೇ ಏಕಾಂಗಿಯಾಗಿ ಆತ್ಮಾರಾಮನಾಗಿಬಿಟ್ಟಿದ್ದನು. ಸರಳವಾದ ಜೀವನವನ್ನು ಅವನು ತನ್ನದಾಗಿಸಿಕೊಂಡಿದ್ದನು. ಒಂದು ದಿನ ಅವನು ಪಟ್ಟಣದ ಹೊರವಲಯದ ಬೆಟ್ಟವೊಂದರ ಮೇಲೆ ರಾತ್ರಿಯ ವೇಳೆಯಲ್ಲಿ ಒಬ್ಬನೇ ಕುಳಿತು, ಆಕಾಶವನ್ನೇ ಏಕಾಗ್ರಮನಸ್ಕನಾಗಿ ನೋಡುತ್ತ, ನಕ್ಷತ್ರಗಳ ಗತಿಯನ್ನು ಪರಿವೀಕ್ಷಿಸುತ್ತಿದ್ದನು. ಬಾಹ್ಯಜಗತ್ತಿನ ಪ್ರಜ್ಞೆಯೇ ಇಲ್ಲದೆ ಅದರಲ್ಲಿಯೇ ಮೈಮರೆತಿದ್ದನು. ಆ ಹೊತ್ತಿಗೆ ಸರಿಯಾಗಿ ನಾಯಿಯೊಂದು ಬೆಟ್ಟವೇರಿ ಬಂದಿತು. ಎತ್ತರವಾದ ಬಂಡೆಯ ಮೇಲೆ ಕುಳಿತಿದ್ದ ವಿಜ್ಞಾನಿಯನ್ನು ಕಂಡು, "ಏನಯ್ಯಾ ಇದು, ಹೀಗೆ ಒಬ್ಬನೇ ಕುಳಿತು ಆಕಾಶವನ್ನು ನೋಡುತ್ತಿದ್ದೀಯಲ್ಲಾ, ನಿನಗೇನಾದರೂ ಹುಚ್ಚುಹಿಡಿದಿದೆಯೋ ಹೇಗೆ" ಎಂದು ಝುಂಕಿಸಿತು.

ವಿಜ್ಞಾನಿಯು ಆ ಮಾತನ್ನು ಕೇಳಿಸಿಕೊಂಡರೂ ಏನೊಂದೂ ಉತ್ತರಕೊಡದೆ ಮೌನವಾಗಿಯೇ ಇದ್ದನು. ಆಗ ಮತ್ತೆ ಆ ಸೊಣಗವು ವಿಜ್ಞಾನಿಯನ್ನು ಕೆಣಕುತ್ತಾ, "ಮದುವೆಯನ್ನೂ ಮಾಡಿಕೊಳ್ಳದೆ ಹೀಗೆ ಒಂಟಿಬಡುಕನಾಗಿರುತ್ತಾರೆಯೇ, ನನಗಾದರೋ ಹೆಂಡತಿಯಿದ್ದಾಳೆ, ಮಕ್ಕಳಿದ್ದಾರೆ, ಹೀಗಲ್ಲವೇ ಸಂತೋಷವಾಗಿರಬೇಕಾದ್ದು" ಎಂದು ಹಂಗಿಸಿತು. ಆಗ ವಿಜ್ಞಾನಿಯು ತನ್ನ ಮೌನವನ್ನು ಮುರಿಯುತ್ತ, "ನನ್ನ ಪ್ರೀತಿಯ ಶ್ವಾನರಾಜನೇ, ನಿನ್ನ ಸುಖವೆಲ್ಲ ನಿನ್ನ ಇಂದ್ರಿಯಗಳಲ್ಲಿದೆ. ಅವುಗಳ ಮೂಲಕ ನೀನು ಆನಂದಿಸುತ್ತೀಯೆ. ಇಂದ್ರಿಯಗಳಿಗೆ ಮೀರಿದ ಆನಂದವೂ ಇದೆಯೆಂಬುದು ನಿನಗೆ ಗೊತ್ತಿಲ್ಲ. ಆದರೆ ನಾನಾದರೋ ನಕ್ಷತ್ರಗಳ ವೀಕ್ಷಣೆಯಿಂದ ಇಂದ್ರಿಯಗಳಿಗೂ ಮೀರಿದ ಆನಂದವನ್ನು ಅನುಭವಿಸುತ್ತಿದ್ದೇನೆ. ನಿನ್ನ ದೃಷ್ಟಿಯಿಂದ ಯಾವುದು ಆನಂದವೋ ಅದನ್ನು ಹುಡುಕಿ ಪಡೆದುಕೊಳ್ಳಲು ನಿನಗೆ ಅಧಿಕಾರವಿದೆ. ಹಾಗೆಯೇ ನನ್ನ ದೃಷ್ಟಿಯಿಂದ ಯಾವುದು ಆನಂದವೋ ಅದನ್ನು ಹುಡುಕಿ ಪಡೆದುಕೊಳ್ಳಲು ನನಗೆ ಅಧಿಕಾರವಿದೆ. ಹಾಗಿರುವಾಗ ನನ್ನನ್ನೇಕೆ ಹೀಯಾಳಿಸುತ್ತೀಯೆ" ಎಂದು ದಬಾಯಿಸಿ ಮಾತನಾಡಿದನು. ಆ ಮಾತಿಗೇನೂ ಉತ್ತರ ಕೊಡಲಾರದೆ ನಾಯಿ ಬೆಟ್ಟದಿಂದ ಕೆಳಕ್ಕಿಳಿದು ಹೊರಟು ಹೋಯಿತು.

ನಾಯಿಯು ಅನ್ನಾಹಾರಗಳನ್ನುಂಡು ಅದುವೇ ಪರಮಸುಖವೆನ್ನುವುದಾದರೆ, ವಿಜ್ಞಾನಿಯು ಆ ಮಟ್ಟಕ್ಕೆ ಇಳಿಯಬಾರದು. ವಿಜ್ಞಾನಿಯ ಆನಂದದ ಮಟ್ಟಕ್ಕೆ ನಾಯಿ ಏರಲಾರದು.